ಆ) ಈ ರಸ್ತೆಗಳ ಸುಧಾರಣೆಗಾಗಿ ಪ್ರಸಕ್ತ ಸಾಲಿನಲ್ಲಿ ಒದಗಿಸಿದ ಅನುದಾನ ರೂ. 173.58 ಲಕ್ಷಗಳು.

ರಸ್ತೆ ಕಾಮಗಾರಿ

180(316) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್:(ಸೇಡಂ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ವಾಗದರಿ–ರಿಬ್ಬನಪಲ್ಲಿ ರಸ್ತೆ ಈಗಾಗಲೇ ಟೆಂಡರ್ ಕರೆಯಲ್ಲಾಗಿದ್ದು ಎಷ್ಟು ದಿವಸಗಳಲ್ಲಿ ಈ ಕೆಲಸ ಪೂರ್ಣಗೊಳಿಸಲಗುವುದು; ಈ ಅವಧಿಯಲ್ಲಿ ಈ ರಸ್ತೆಯ ನಿರ್ವಹಣೆ ಕಾರ್ಯದ ಜವಾಬ್ದಾರಿ ಯಾರದ್ದು, (ವಿವರ ಒದಗಿಸುವುದು)?

ಶ್ರೀ ಸಿ ಎಂ ಉದಾಸಿ(ಮಾನ್ಯ ಲೋಕೋಪಯೋಗಿ ಸಚಿವರು):

ಆ) ದಿನಾಂಕ 04–06–2010ರಂದು ರಿಯಾಯಿತಿದಾರರೊಂದಿಗೆ ಗುತ್ತಿಗೆ ಕರಾರು ಮಾಡಿಕೊಂಡಿದ್ದು, ಕರಾರು ನಿಬಂಧನೆ 24ರಂತೆ ಕರಾರು ಒಪ್ಪಂದದ ದಿನಾಂಕದಿಂದ 6 ತಿಂಗಳ ಅವಧಿಯಲ್ಲಿ ರಿಯಾಯಿತಿದಾರರು Financial Closure ಪಡೆದು ಅಂದಿನಿಂದ ನಿಬಂಧನೆ 12ರ 12.4ರಂತೆ 24 ತಿಂಗಳ ಕಾಲಾವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗುತ್ತದೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕಾಮಗಾರಿ ಪ್ರಾರಂಭ ಮಾಡುವವರೆಗೂ ನಿರ್ವಹಣೆ ಜವಾಬ್ದಾರಿಯು ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡ (ಉತ್ತರ) ಧಾರವಾಡರವರಿಗೆ ಒಳಪಟ್ಟಿರುತ್ತದೆ.

ಜಿಲ್ಲಾ ಮುಖ್ಯರಸ್ತೆ ದುರಸ್ತಿ

181(317) ಡಾ: ಶರಣಪ್ರಕಾಶ್ ಪಾಟೀಲ:(ಸೇಡಂ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ಮತಕ್ಷೇತ್ರದಲ್ಲಿರುವ ಜಿಲ್ಲಾ ಮುಖ್ಯ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮವೇನು?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಸೇಡಂ ಮತಕ್ಷೇತ್ರದಲ್ಲಿ ಒಟ್ಟು 14 ಜಿಲ್ಲಾ ಮುಖ್ಯರಸ್ತೆಗಳು ಇದ್ದು ಅವುಗಳ ಒಟ್ಟು ಉದ್ದ 256.80 ಕಿಮೀ ಇರುತ್ತದೆ. ಈ ಪೈಕಿ ಚಿಂಚೋಳಿ ತಾಲೂಕಿನ ಸೇಡಂ ಮತಕ್ಷೇತ್ರದ 11.80 ಕಿಮೀ ಉದ್ದದ ರಸ್ತೆಯನ್ನು 2009–10ನೇ ಸಾಲಿನ ಡಾ: ನಂಜುಂಡಪ್ಪ ವರದಿ ಯೋಜನೆ ಅಡಿ ಕೈಗೆತ್ತಿಕೊಂಡಿದ್ದು, ಬಾಕಿ ಉಳಿದ ಸೇಡಂ ಮತಕ್ಷೇತ್ರದಲ್ಲಿ ಬರುವ 245.00 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ನಿಯತಕಾಲಿಕವಾಗಿ ತಗ್ಗುಗುಂಡಿ ಮುಚ್ಚುವುದು, ಸೈಡ್ ಬರ್ಮ ಕಟಿಂಗ್ ಮಾಡುವುದು ಇತ್ಯಾದಿ ಕಾಮಗಾರಿಗಳನ್ನು ವಾರ್ಷಿಕ ನಿರ್ವಹಣಾ ಅನುದಾನದಿಂದ ಕೈಗೊಂಡು, ರಸ್ತೆಗಳನ್ನು ಸುಸ್ಥಿತಿಯಲ್ಲಿರುವಂತೆ ನೋಡಿ ಕೊಳ್ಳಲಾಗುತ್ತಿದೆ ಹಾಗೂ 2010–11ನೇ ಸಾಲಿನಲ್ಲಿ ಪ್ರತಿ ಮತಕ್ಷೇತ್ರಕ್ಕೆ ಲೆಕ್ಕ ಶೀರ್ಷಿಕೆ: 5054 ಓಆರ್‌ಎಫ್ ಅಡಿ ರೂ.150.00 ಲಕ್ಷಗಳ ಕ್ರಿಯಾ ಯೋಜನೆಯು ಪರಿಶೀಲನೆಯ ಹಂತದಲ್ಲಿದ್ದು,

ಆದ್ಯತೆಯ ಮೇರೆಗೆ ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಟ್ರ್ಯಾಕ್ಟರ್‌ಗೆ ಸಹಾಯಧನ

182 (318) ಡಾ. ಶರಣಪ್ರಕಾಶ ರುದ್ರಪ್ಪ ಪಾಟೀಲ್:(ಸೇಡಂ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ರೈತರಿಂದ ಟ್ರಾಕ್ಟರ್ಸ್ ಸಹಾಯಧನ ಮಂಜೂರು ಸಲುವಾಗಿ 2008–09 ಮತ್ತು 2009–10ನೇ ಸಾಲಿನಲ್ಲಿ ಬಂದಿರುವ ಅರ್ಜಿಗಳೆಷ್ಟು?

ಆ) ಅವುಗಳಲ್ಲಿ ಮಂಜೂರು ಮಾಡಿರುವ ಮತ್ತು ಉಳಿದಿರುವ ಅರ್ಜಿಗಳೆಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು)

ಇ) ಮಂಜೂರು ಆಗದೇ ಉಳಿದಿರುವುಗಳನ್ನು ಎಂದಿನಿಂದ ಮಂಜೂರು ಮಾಡಲಾಗುವುದು?

ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಸಚಿವರು):

ಅ) ರಾಜ್ಯಾದ್ಯಂತ ರೈತರಿಂದ ಟ್ರಾಕ್ಟರ್ ಸಹಾಯಧನ ಮಂಜೂರು ಸಲುವಾಗಿ 2008–09 ಮತ್ತು 2009–10ನೇ ಸಾಲಿನಲ್ಲಿ ಬಂದಿರುವ ಅರ್ಜಿಗಳ ಸಂಖ್ಯೆ ಅನುಕ್ರಮವಾಗಿ 7593 ಮತ್ತು 8888.

ಆ) ಅವುಗಳಲ್ಲಿ 2008–09 ಮತ್ತು 2009–10ನೇ ಸಾಲಿನಲ್ಲಿ ಅನುಕ್ರಮವಾಗಿ 6905 ಮತ್ತು 2696 ಅರ್ಜಿಗಳಿಗೆ ಸಹಾಯಧನವನ್ನು ಮಂಜೂರು ಮಾಡಲಾಗಿದೆ ಮತ್ತು